DEPARTMENT / SUBJECT: Speaker

NAME OF THE NEWS PAPER: DATE : 29/11/19

# ಉಪಚುನಾವಣೆಯಲ್ಲಿ ಸಂವಿಧಾನ ಗೆಲ್ಲುತ್ತೆ

**ಗೋಕಾಕ:** ಉಪಚುನಾವಣೆಯಲ್ಲಿ ಸಂವಿಧಾನ ಗೆಲ್ಲುತ್ತೆ. ನಮ್ಮ ದೇಶದ ಜನ ಸಂವಿಧಾನವನ್ನು ಎತ್ತಿಹಿಡಿದ್ದಾರೆ. ಸಂವಿಧಾನ ವಿಷಯ ಬಂದಾಗ ಇಂದಿರಾ ಗಾಂಧಿ, ನಿಜಲಿಂಗಪ್ಪ ಅಂಥವರನ್ನು ಸೋಲಿಸಿದ್ದಾರೆ ಎಂದು ಮಾಜಿ ಸ್ಪೀಕರ್ ರಮೇಶ್ ಕುಮಾರ್ ಹೇಳಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈಗ ಇವರು ಯಾವ ಪುಡಿ ಲೆಕ್ಕ ಎಂದು ರಮೇಶ್ ಜಾರಕಿಹೊಳಿ ವಿರುದ್ಧ ವಾಗ್ದಾಳಿ ನಡೆಸಿದರು. ರಾಜೀನಾಮೆ ಎನ್ನುವುದು ಗೌರವ ಪ್ರಕ್ರಿಯೆ, ಅನರ್ಹತೆ ಎನ್ನುವುದು ಶಿಕ್ಷೆ. ಈ ಬಗೆಗಿನ ನನ್ನ ಅಭಿಪ್ರಾಯಕ್ಕೆ ಸುಪ್ರೀಂಗೆ. ಗೊಂದಲ ಇದೆ. ಪಕ್ಷಾಂತರ ಕಾಯಿದೆ ಇನ್ನೂ ಗಟ್ಟಿಯಾಗಬೇಕು, ಪರಿಷ್ಕರಣೆ ಆಗಬೇಕು. ಜನರಿಗೆ ನನ್ನ ತೀರ್ಪು ಮನವರಿಕೆ ಮಾಡಲು ಬಂದಿದ್ದೇನೆ. ಜನತಾ ನ್ಯಾಯಾಲದಲ್ಲಿ ನಮಗೆ ಗೆಲುವಾಗುತ್ತದೆ. 15 ಮತಕ್ಷೇತ್ರಗಳಲ್ಲಿ ನಾವು ಗೆಲ್ಲುತ್ತೇವೆ ಸೋತರೆ ಸಂವಿಧಾನಕ್ಕೆ ಹಿನ್ನಡೆ ಯಾಗಲಿದೆ ಎಂದರು.

ದುರುದ್ದೇಶಪೂರ್ವಕವಾಗಿ ರಾಜೀನಾಮೆ ಸಲ್ಲಿಸಿ ಆಯ್ಕೆ ಮಾಡಿದ ಜನರಿಗೆ ದ್ರೋಹ ಬಗೆದಿದ್ದಾರೆ, ಸುಪ್ರೀಂಕೋರ್ಟ್, ಜನ ಈ ಬಗ್ಗೆ ತೀರ್ಮಾನ ಮಾಡಲಿ. ಜನರಲ್ಲಿ ನಮಗೆ ವಿಶ್ವಾಸವಿದೆ. ಜನ ಖಚಿತವಾಗಿ ಇವರಿಗೆ ಪಾಠ ಕಲಿಸುತ್ತಾರೆ. 15 ಕ್ಷೇತ್ರಗಳಲ್ಲಿ ಸಂವಿಧಾನಕ್ಕೆ ಗೆಲುವು ಆಗುತ್ತೆ ಎಂದರು

ಸಂವಿಧಾನದ ಮೇಲೆ ಪ್ರಮಾಣ ಮಾಡಿ ಸಿಎಂ ಆಗಿರುವ ಬಿಎಸ್‌ವೈ, ಇವರೆಲ್ಲರು ಸಂವಿಧಾನಕ್ಕೆ ಅನುಗುಣವಾಗಿ ನಡೆದುಕೊಂಡಿದ್ದಾರೆ ಎಂದು ಹೇಳಲಿ. ನೀವು ಮೊದಲು ಹೇಳುತ್ತಿದ್ದೀರಿ ಅನರ್ಹರಿಗೂ ನಮಗೂ ಸಂಬಂಧವಿಲ್ಲ, ನೀವು ತಿಳಿದವರು ಅಥವಾ ತಿಳಿಯದವರು ಒಂದೂ ಅರ್ಥವಾಗುತ್ತಿಲ್ಲ. ಜನರ ಮುಂದೆ ಹೋಗಿ ಅನರ್ಹರಿಗೆ ಮತ ಹಾಕಿ, ಇವರಿಂದ ನಾನು ಅಧಿಕಾರಕ್ಕೆ ಬಂದಿದ್ದೇನೆ. ಅಧಿಕೃತವಾಗಿ ಪಕ್ಷಕ್ಕೆ ಸೇರಿಸಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡರು.

> **6** ವೀರಶೈವ ಲಿಂಗಾಯತ ಧರ್ಮದ ತತ್ವಾದರ್ಶಗಳನ್ನು ಅನುಸರಿಸುವ ಜನರು ಯಾವುದೇ ಕಾರಣಕ್ಕೂ ಜಾತಿಯ ಹೆಸರಿನಲ್ಲಿ ಮತ ಹಾಕುವುದಿಲ್ಲ. ಸಿಎಂ ಯಡಿಯೂರಪ್ಪ ಅವರು ಅನರ್ಹರ ತ್ಯಾಗದಿಂದಲೇ ನಾನೂ ಮುಖ್ಯಮಂತ್ರಿ ಆಗಿದ್ದೇನೆ ಎಂದಿದ್ದಾರೆ. ಜಾತಿ ಧರ್ಮದ ಹೆಸರಿನಲ್ಲಿ ಮತ ಕೇಳುವವರಿಗೆ ಜನರು ತಕ್ಕ ಪಾಠ ಕಲಿಸಬೇಕು. ಜಾತಿ, ಧರ್ಮದ ಹೆಸರಿನಲ್ಲಿ ಮತ ಕೇಳುವುದು ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗಿದ್ದು ಕ್ರಿಮಿನಲ್ ಅಪರಾಧವಾಗಿದೆ.
>
> **– ಈಶ್ವರ ಖಂಡ್ರೆ**
> ಕೆಪಿಸಿಸಿ ಕಾರ್ಯಾಧ್ಯಕ್ಷ